## 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 96/2019

P.W : 19

C.W: 9

**ದಿನಾಂಕ 13.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| **ಹೆಸರು** | : | ಗಿರೀಶ |
| **ತಂದೆಯ ಹೆಸರು** | : | ರಾಜಣ್ಣ |
| **ವಯಸ್ಸು** | : | 47 ವರ್ಷ |
| **ವೃತ್ತಿ** | : | ಮಂಡಿಪೇಟೆಯಲ್ಲಿ ಕೆಲಸ |
| **ವಾಸಸ್ಥಳ** | : | ಶಿರಾಗೇಟ್ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಆರೋಪಿ ಮುರುಳಿ ಕೃಷ್ಣ, ಅಕ್ಷಯ್ , ರಂಗಸ್ವಾಮಿ, ಕಿರಣ್ ಕುಮಾರ್ , ಪ್ರಮೋದ ದರೋಡೆ ನಡೆಸಲು ಒಳ ಸಂಚು ನಡೆಸಿದ ಸ್ಥಳದ ಪಂಚನಾಮೆಯಾಗಿದ್ದು, ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ.42 ಎಂದು ಗುರುತಿಸಲಾಯಿತು, ಸಾಕ್ಷಿದಾರರ ಸಹಿಯನ್ನು ನಿಪಿ42(ಬಿ) ಎಂದು ಗುರುತಿಸಲಾಯಿತು.

2. ಕಳೆದ 5 ವರ್ಷಗಳ ಹಿಂದೆ ನಾನು ನನ್ನ ಸ್ನೇಹಿತ ಎಡೆಯೂರಿನ ದೇವಸ್ಥಾನಕ್ಕೆ ಹೋಗುತ್ತಿರುವಾಗ ಪೋಲೀಸರು ಕುಣಿಗಲ್ ಪೋಲೀಸ್ ಠಾಣೆಯ ಬಳಿ ನಿಪಿ.42 ಕ್ಕೆ ನನ್ನ ಸಹಿ ಪಡೆದಿದ್ದಾರೆ. ನಾನು ಸಹಿ ಮಾಡಿರುವ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಅವರ ವಶದಲ್ಲಿ ಇದ್ದ ಯಾವುದೇ ವ್ಯಕ್ತಿಗಳ ಪರಿಚಯ ನಮಗೆ ನೀಡಿರುವುದಿಲ್ಲ ಹಾಗೂ ನಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ .

3. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಆರೋಪಿ ಕಿರಣ್ ಕುಮಾರ್ ರವರ ಕಡೆಯಿಂದ ಈ ಕೇಸಿನ ದರೋಡೆಗೆ ಸಂಬಂದಿಸಿದ ನಗದು ಹಣವನ್ನು ವಶಪಡಿಸಿಕೊಂಡ ಅಮಾನತ್ತು ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ.43 ಎಂದು, ಸಾಕ್ಷಿಯ ಸಹಿಯನ್ನು ನಿಪಿ.43(ಬಿ) ಎಂದು ಗುರುತಿಸಲಾಯಿತು. ನಾನು ಸದರಿ ದಾಖಲೆಗೆ ನಿಪಿ.42 ಕ್ಕೆ ಸಹಿ ಮಾಡುವ ಸಮಯದಲ್ಲಿ ಸಹಿ ಮಾಡಿರುತ್ತೇನೆ. ನಿಪಿ.43 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪೋಲೀಸರು ನನಗೆ ಯಾವುದೇ ವ್ಯಕ್ತಿಯನ್ನು ತೋರಿಸಿ ಅವರಿಂದ ಅಮಾನತ್ತು ಪಂಚನಾಮೆ ಮಾಡಿಲ್ಲ.

4. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ದಾಖಲೆಯು ಆರೋಪಿ 1 ರಿಂದ 9 ರವರು ಡಕಾಯತಿ ನಡೆಸಲು ಒಳಸಂಚು ರೂಪಿಸಿದ ಸ್ಥಳದ ಪಂಚನಾಮೆಯಾಗಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ.44 ಎಂದು , ಸಾಕ್ಷಿಯ ಸಹಿಯನ್ನು ನಿಪಿ.44(ಬಿ) ಎಂದು ಗುರುತಿಸಲಾಯಿತು. ನಾನು ನಿಪಿ.42, 43 ಕ್ಕೆ ಸಹಿ ಮಾಡಿದ ಸಮಯದಲ್ಲಿಯೇ ನಿಪಿ.44 ಕ್ಕೆ ಸಹಿ ಮಾಡಿದ್ದೇನೆ . ಪೋಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳಪಂಚನಾಮೆ ಮಾಡಿಲ್ಲ ಹಾಗೂ ಅವರ ವಶದಲ್ಲಿ ಇದ್ದ ಯಾವುದೇ ಆರೋಪಿಗಳನ್ನು ನನಗೆ ತೋರಿಸಿಲ್ಲ. ನಿಪಿ.44 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ .

5. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಸದರಿ ದಾಖಲೆಯಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಆರೋಪಿ ರಂಗಸ್ವಾಮಿ ಕಡೆಯಿಂದ ಈ ಕೇಸಿನ ದರೋಡೆ ಸಂಬಂದಿಸಿದ ನಗದು ಹಣ ವಶಪಡಿಸಿಕೊಂಡ ಅಮಾನತ್ತು ಪಂಚನಾಮೆಯಾಗಿದ್ದು ಇದನ್ನು ಈಗಾಗಲೇ ನಿಪಿ.45 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.45(ಬಿ ) ಎಂದು ಗುರುತಿಸಲಾಯಿತು. ನಿಪಿ.45 ಕ್ಕೆ ನಾನು ನಿಪಿ 44 ಕ್ಕೆ ಸಹಿ ಮಾಡಿದ ಸಮಯದಲ್ಲಿಯೇ ಸಹಿ ಮಾಡಿರುತ್ತೇನೆ . ನಿಪಿ.45 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಆರೋಪಿಯ ವಶದಿಂದ ಯಾವುದೇ ಹಣವನ್ನು ಅಮಾನತ್ತುಪಡಿಸಿಕೊಂಡಿಲ್ಲ ಹಾಗೂ ಪಂಚನಾಮೆಯನ್ನು ಮಾಡಿಲ್ಲ.

6. ಸಾಕ್ಷಿ ಮತ್ತೊಂದು ದಾಖಲೆಯಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಆರೋಪಿ ಅಕ್ಷಯ್ ಕಡೆಯಿಂದ ಈ ಕೇಸಿನ ದರೋಡೆಗೆ ಸಂಬಂದಿಸಿದ ನಗದು ಹಣ ಮತ್ತು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡ ಅಮಾನತ್ತು ಪಂಚನಾಮೆಯಾಗಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ46 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 46(ಬಿ) ಎಂದು ಗುರುತಿಸಲಾಯಿತು. ನಾನು ನಿಪಿ.45ಕ್ಕೆ ಸಹಿ ಮಾಡಿದ ಸಮಯದಲ್ಲಿಯೇ ನಿಪಿ.46 ಕ್ಕೆ ಸಹಿ ಮಾಡಿದ್ದೇನೆ. ನಿಪಿ.46 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ನನ್ನ ಸಮಕ್ಷಮ ಪೋಲೀಸರು ಯಾವುದೇ ಹಣ ಹಾಗೂ ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ಜರೂಗಿಸಿಲ್ಲ.

7 . ಸಾಕ್ಷಿ ಮತ್ತೊಂದು ದಾಖಲೆಯಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಆರೋಪಿ ಮುರುಳಿಕೃಷ್ಣ ಕಡೆಯಿಂದ ಈ ಕೇಸಿನ ದರೋಡೆ ಸಂಬಂದಿಸಿದ ನಗದು ಹಣ ಮತ್ತು ಮಚ್ಚು ಹಾಗೂ ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡ ಪಂಚನಾಮೆಯಾಗಿದ್ದು ಇದನ್ನು ಈಗಾಗಲೇ ನಿಪಿ 47 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.47(ಬಿ) ಎಂದು ಗುರುತಿಸಲಾಯಿತು. ನಿಪಿ.47 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಪೋಲೀಸರು ನನ್ನ ಸಮಕ್ಷಮ ಯಾವುದೇ ಹಣ , ಮಚ್ಚು ಹಾಗೂ ದ್ವಿಚಕ್ರವಾಹನವನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿಲ್ಲ.

8. ಸಾಕ್ಷಿ ಮತ್ತೊಂದು ದಾಖಲೆಯಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಆರೋಪಿ ಮನೋಜ್ ಕಡೆಯಿಂದ ಈ ಕೇಸಿನ ದರೋಡೆ ಸಂಬಂದಿಸಿದ ನಗದು ಹಣ ಮತ್ತು ಡ್ರ್ಯಾಗನ್, ಬ್ಯಾಗ್ , ಪೇಪರ್ ಸ್ಪೇ ಹಾಗೂ ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡ ಪಂಚನಾಮೆಯಾಗಿದ್ದು ಇದನ್ನು ಈಗಾಗಲೇ ನಿಪಿ.48 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 48(ಬಿ) ಎಂದು ಗುರುತಿಸಲಾಯಿತು. ನಾನು ನಿಪಿ.47 ಕ್ಕೆ ಸಹಿ ಮಾಡಿದ ಸಮಯದಲ್ಲಿ ನಿಪಿ 48 ಕ್ಕೆ ಸಹಿ ಮಾಡಿದ್ದೇನೆ. ನಿಪಿ.48 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಪೋಲೀಸರು ನನ್ನ ಸಮಕ್ಷಮ ಯಾವುದೇ ಹಣ , ಆಯುಧ ಮತ್ತು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

9 . ಸಾಕ್ಷಿ ಮತ್ತೊಂದು ದಾಖಲೆಯಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಆರೋಪಿ ಮಹೇಶನ ಕಡೆಯಿಂದ ಈ ಕೇಸಿನ ದರೋಡೆಗೆ ಸಂಬಂದಿಸಿದ ನಗದು ಹಣ ಮತ್ತು ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡ ಪಂಚನಾಮೆಯಾಗಿದ್ದು ಇದನ್ನು ಈಗಾಗಲೇ ನಿಪಿ 49 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 49(ಬಿ) ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ .

10. ಸಾಕ್ಷಿ ಮತ್ತೊಂದು ದಾಖಲೆಯಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಆರೋಪಿ ಪ್ರಮೋದನ ಕಡೆಯಿಂದ ಈ ಕೇಸಿನ ದರೋಡೆಗೆ ಸಂಬಂದಿಸಿದ ನಗದು ಹಣವನ್ನು ವಶಪಡಿಸಿಕೊಂ ಅಮಾನತ್ತುಪಂಚ ನಾಮೆಯಾಗಿದ್ದು ಇದನ್ನು ಈಗಾಗಲೇ ನಿಪಿ 50 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 50(ಬಿ) ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ .

ನಾನು ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ಹಾಗೂ ಹಣವನ್ನು ಈ ಹಿಂದೆ ನೋಡಿಲ್ಲ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗಳಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷ ಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಪಿಪಿ ರವರಿಂದಃ**

11. ದಿ 29.11.18 ರಂದು ಕುಣಿಗಲ್ ಪೋಲೀಸರು ನನ್ನನ್ನು ಹಾಗೂ ಚಾ.ಸಾ.10 ರವರನ್ನು ಪಂಚರನ್ನಾಗಿ ತಮ್ಮ ಠಾಣೆಗೆ ಬರಮಾಡಿಕೊಂಡು ತಮ್ಮ ವಶದಲ್ಲಿ ಇದ್ದ ಆರೋಪಿತರನ್ನು ನಮಗೆ ತೋರಿಸಿ ಈ ಪ್ರಕರಣದ ವಿವರಗಳನ್ನು ನಮಗೆ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದರು ಅಂದರೆ ಸರಿಯಲ್ಲ. ನಾವು ಸಹಕರಿಸಲು ಒಪ್ಪಿದ್ದರ ಮೇರೆಗೆ ಪೋಲೀಸರು ನಮ್ಮನ್ನು ಮೊದಲಿಗೆ ಸಿಲ್ಲಿಗುರಿ ಟೀ ಪಾಯಿಂಟ್ ಮತ್ತು ಹೈದ್ರಾರಬಾದ್ ಟೀ ,ಇರಾನಿ ಟೀ ಹೋಟೇಲ್ ನಂ.18837, 5 ನೇ ಕ್ರಾಸ್ , ಕುರುಬರಹಳ್ಳಿ , ಬೆಂಗಳೂರು ಇಲ್ಲಿಗೆ ಕರೆದುಕೊಂಡು ಹೋಗಿ, ಆರೋಪಿಗಳಾದ ಮುರುಳಿ ಕೃಷ್ಣ , ಅಕ್ಷಯ್ . ರಂಗಸ್ವಾಮಿ, ಕಿರಣ್ ಕುಮಾರ್ , ಪ್ರಮೋದ್ ದರೋಡೆ ನಡೆಸಲು ಒಳಸಂಚು ರೂಪಿಸಿದ ಸ್ದಳದಲ್ಲಿ ಆರೋಪಿಗಳು ತೋರಿಸಿದ ರೀತ್ಯಾ ಬೆಳಗ್ಗೆ 10.15 ರಿಂದ 10.45 ರವರಿಗೆ ನಿಪಿ.42 ರಂತೆ ಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ.

12. ನಂತರ ಅದೇ ದಿನ ಪೋಲೀಸರು ಬೆಂಗಳೂರು ನಗರದ ಕಮಲನಗರದಲ್ಲಿ 2 ನೇ ಕ್ರಾಸ್ , 3 ನೇ ಮುಖ್ಯ ರಸ್ತೆಯಲ್ಲಿರುವ ನಂ.387 ಶ್ರೀ ಜಯರಂಗಯ್ಯರವರ ವಾಸದ ಮನೆಯ ಹತ್ತಿರ ಆರೋಪಿ ಕಿರಣ್ ಕುಮಾರ್ ರವರ ಕಡೆಯಿಂದ ಈ ದರೋಡೆಗೆ ಸಂಬಂದಿಸಿದ ನಗದು ಹಣವನ್ನು ವಶಪಡಿಸಿಕೊಂಡು ನಿಪಿ.43 ರಂತೆ ಸ್ದಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ. ಆರೋಪಿ ಕಿರಣ್ ಕುಮಾರ್ ರವರ ಕಡೆಯಿಂದ ನ್ಯಾಯಾಲಯದ ಮುಂದೆ ಇರುವ 500 ಮುಖ ಬೆಲೆಯ 8 ನೋಟುಗಳು , 100 ಮುಖ ಬೆಲೆಯ 7 ನೋಟುಗಳು, 50 ರೂ ಮುಖ ಬೆಲೆಯ 16 ನೋಟುಗಳು, 20 ರೂ ಮುಖ ಬೆಲೆಯ 25 ನೋಟುಗಳು ಒಟ್ಟು ನಮ್ಮ ಸಮಕ್ಷಮ ಆರೋಪಿಯ ಕಡೆಯಿಂದ ರೂ.6,000 00 ಗಳನ್ನು ನಿಪಿ 43 ರ ಪಂಚನಾಮೆಯ ಸಮಯದಲ್ಲಿ ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮೇಲ್ಕಂಡ ಸ್ಥಳದಲ್ಲಿ ಬೆಳಗ್ಗೆ 11 ರಿಂದ 11.45 ರವರಿಗೆ ಜರೂಗಿಸಲಾಯಿತು ಅಂದರೆ ಸರಿಯಲ್ಲ .

13) ನಂತರ ಆರೋಪಿಗಳು ಅಲ್ಲಿಂದ ನಮ್ಮನ್ನು ಶ್ರೀ ಗಣಪತಿ ದೇವಸ್ದಾನದ ಕಾಂಪೌಂಡ್ ನಲ್ಲಿ, 1 ನೇ ಕ್ರಾಸ್ , 1 ನೇ ಮೈನ್ , ಕಮಲನಗರ , ಬೆಂಗಳೂರು ಇಲ್ಲಿಗೆ ಮಧ್ಯಾಹ್ನ 12 ಗಂಟೆಯ ವೇಳೆಗೆ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಸದರಿ ಸ್ದಳದಲ್ಲಿ ಆರೋಪಿ 1 ರಿಂದ 9 ರವರು ಈ ಪ್ರಕರಣವನ್ನು ನಡೆಸಲು ಒಳಸಂಚು ರೂಪಿಸಿದ್ದಾಗಿ ತಿಳಿಸಿದ್ದರ ಮೇರೆಗೆ ಪೋಲೀಸರು ಸದರಿ ಸ್ಥಳದಲ್ಲಿ ಮಧ್ಯಾಹ್ನ 12 ರಿಂದ

12.30 ರವರಿಗೆ ನಿಪಿ 44 ರಂತೆ ಪಂಚನಾಮೆ ಜರೂಗಿಸಿ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ .

14) ಆರೋಪಿಗಳು ಅಲ್ಲಿಂದ ನಮ್ಮ ಬೆಂಗಳೂರಿನ ಕಮಲನಗರದ 4 ನೇ ಮೈನ್ , 4 ನೇ ಕ್ರಾಸ್ ನಲ್ಲಿ ಇರುವ ರಮೇಶ್ ರವರ ಮನೆಯ ಬಳಿ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಆರೋಪಿ ರಂಗಸ್ವಾಮಿ ಈ ಕೇಸಿನ ದರೋಡೆಗೆ ಸಂಬಂಧಿಸಿದ 500 ಮುಖ ಬೆಲೆಯ 40 ನೋಟುಗಳು ಒಟ್ಟು ರೂ.20,000 00 ಹಣವನ್ನು ಪೋಲೀಸರ ಮುಂದೆ ನಮ್ಮ ಸಮಕ್ಷಮ ಹಾಜರುಪಡಿಸಿದರು ಅಂದರೆ ಸರಿಯಲ್ಲ. ಪೋಲೀಸರು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 12.45 ರಿಂದ 1.45 ರವರಿಗೆ ಅಮಾನತ್ತು ಪಂಚನಾಮೆ ಮಾಡಿ ನಮ್ಮ ಸಹಿ ಪಡೆದರು ಅಂದರೆ ಸರಿಯಲ್ಲ .

15. ಆರೋಪಿಗಳು ನಮ್ಮನ್ನು ಅಲ್ಲಿಂದ ನಂ.99 , ಮಾರುತಿ ನಿಲಯ, 1 ನೇ ಮೈನ್ , 1 ನೇ ಕ್ರಾಸ್ ( 2 ನೇ ಕ್ರಾಸ್ ) ಕಮಲನಗರ , ಶ್ರೀ ಗಣಪತಿ ದೇವಸ್ಥಾನದ ಹತ್ತಿರ ಬೆಂಗಳೂರು ಇಲ್ಲಿಗೆ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಸದರಿ ಸ್ದಳದಲ್ಲಿ ಆರೋಪಿ ಅಕ್ಷಯ್ ಈ ದರೋಡೆಗೆ ಸಂಬಂದಿಸಿದ 500 ರೂ ಮುಖ ಬೆಲೆಯ 10 ನೋಟುಗಳು ಒಟ್ಟು ರೂ.5,000 00 ಹಾಗೂ ಈ ಕೃತ್ಯವೆಸಗಲು ತಾನು ಬಳಸಿದ ಹೋಂಡಾ ಡ್ಯೂಯೋ ಕೆಎ 02 ಜೆ ಡಬ್ಲ್ಯೂ 2679 ವಾಹನವನ್ನು ನಮ್ಮ ಸಮಕ್ಷಮ ಪೋಲೀಸರ ಮುಂದೆ ಹಾಜರುಪಡಿಸಿದರು ಅಂದರೆ ಸರಿಯಲ್ಲ. ಪೊಲೀಸರು ಸದರಿ ವಸ್ತುಗಳನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 1.40 ರಿಂದ 2.25 ರವರಿಗೆ ನಿಪಿ 46 ರಂತೆ ಪಂಚನಾಮೆ ಮಾಡಿರುತ್ತಾರೆ ಅಂದರೆ ಸರಿಯಲ್ಲ.

16. ಆರೋಪಿಗಳು ನಮ್ಮನ್ನು ಸದರಿ ಸ್ದಳದಿಂದ ನಂ 10/ಎ 6 ನೇ ಕ್ರಾಸ್ , 11 ನೇ ಮೈನ್ , ಮಾರುತಿ ನಗರ , ಸಣ್ಣಕ್ಕನ ಬಯಲು , ಕಾಮಾಕ್ಷಿ ಪಾಳ್ಯ , ಬೆಂಗಳೂರಿನಲ್ಲಿ ಇರುವ ಆರೋಪಿ ಮುರುಳಿಕೃಷ್ಣನ ವಾಸದ ಮನೆಯ ಬಳಿ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿ ಮುರುಳಿ ಕೃಷ್ಣ ಈ ಪ್ರಕರಣಕ್ಕೆ ಸಂಬಂದಿಸಿದ ರೂ.2,000 0 ಮುಖ ಬೆಲೆಯ 7 ನೋಟುಗಳು, ರೂ.500 ಮುಖ ಬೆಲೆಯ 62 ನೋಟುಗಳು ಒಟ್ಟು ರೂ.45,000 00 ಮತ್ತು ಕಬ್ಬಿಣದ ಕೊಳವೆ ಮಚ್ಚು, ಹೋಂಡಾ ಡಿಯೋ ಕೆಎ.02.ಜೆಯು.4319 ನಮ್ಮ ಸಮಕ್ಷಮ ಪೋಲೀಸರ ಮುಂದೆ

ಹಾಜರುಪಡಿಸಿದರು ಅಂದರೆಸರಿಯಲ್ಲ. ಪೊಲೀಸರು ಸದರಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 2.40 ರಿಂದ 3.25 ರವರಿಗೆ ನಿಪಿ 47 ರಂತೆ ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದರು ಅಂದರೆ ಸರಿಯಲ್ಲ.

17) ಆರೋಪಿಗಳು ನಮ್ಮನ್ನು ಅಲ್ಲಿಂದ ನಂ.# 4/13, ಶ್ರೀಯಡಿಯೂರು ಸಿದ್ದಲಿಂಗೇಶ್ವರ ನಿಲಯ, 2 ನೇ ಮುಖ್ಯ ರಸ್ತೆ , ನ್ಯೂ ಲೇಔಟ್ , ವಿಜಯ ಟಾಕೀಸ್ ರಸ್ತೆಯ ಪಕ್ಕ , ಮೈಸೂರು ರಸ್ತೆ , ಬ್ಯಾಟರಾಯನ ಪುರ , ಬೆಂಗಳೂರು ಇಲ್ಲಿಗೆ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿ ಮನೋಜ್ ಕಡೆಯಿಂದ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ರೂ.500 ಮುಖ ಬೆಲೆಯ 94 ನೋಟುಗಳು ಒಟ್ಟು ರೂ.47,000 00 ಗಳನ್ನು ಹಾಗೂ ಹೋಂಡಾ ಡಿಯೋ ಕಂಪನಿಯ ಕೆಎ 05 ಕೆಎಲ್ 5581 , ಒಂದು ಮೈಸೂರು ಟಾರ್ಪಲ್ ನ ಬ್ಯಾಗ್ , ಒಂದು ಪೇಪರ್ ಸ್ಪೇ ಬಾಟೆಲ್ ಹಾಗೂ ಒಂದು ಡ್ರ್ಯಾಗರ್ ನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ . ಪೋಲೀಸರು ಮೇಲ್ಕಂಡ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಸಂಜೆ 4.45 ರಿಂದ 5.30 ಯವರಿಗೆ ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ.

18) ಪೊಲೀಸರು ಅಲ್ಲಿಂದ ಆರೋಪಿಗಳೊಂದಿಗೆ ಅವರುತೋರಿಸಿದ ರೀತ್ಯಾ 7 ನೇ ಕ್ರಾಸ್ , ಶ್ರೀನಿವಾಸ ನಗರ , ಬೆಂಗಳೂರು ಆರೋಪಿ ಮಹೇಶನ ವಾಸದ ಮನೆಯ ಬಳಿ ಅದೇ ದಿನ ಕರೆದುಕೊಂಡು ಬಂದರು ಅಂದರೆ ಸರಿಯಲ್ಲ. ಅಲ್ಲಿ ಆರೋಪಿ ಮಹೇಶನ ಕಡೆಯಿಂದ ಈ ಪ್ರಕರಣಕ್ಕೆ ಸಂಬಂದಪಟ್ಟ ರೂ. 13,350 00 ( ರೂ 2000 ಮುಖ ಬೆಲೆಯ 5 ನೋಟು, ರೂ.100 ಮುಖಬೆಲೆಯ 20 ನೋಟು , 50 ರೂ ಮುಖ ಬೆಲೆಯ 27 ನೋಟುಗಳನ್ನು.) ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ಮೇಲ್ಕಂಡ ಆರೋಪಿಯ ವಶದಿಂದ ಕೆಎ 05 ಜೆವೈ 8353 ಅಮಾನತ್ತುಪಡಿಸಿಕೊಂಡು ನಮ್ಮ ಸಮಕ್ಷಮ ಸಂಜೆ 6 ಗಂಟೆಯಿಂದ 6.45 ರವರಿಗೆ ನಿಪಿ 49 ರಂತೆ ಪಂಚನಾಮೆಮಾಡಿ ಪಂಚನಾಮೆಗೆ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ.

19 ) ನಂತರ ಅದೇ ದಿನ ಪೊಲೀಸರು ಆರೋಪಿಗಳು ತೋರಿಸಿದ ರೀತ್ಯಾ ನಮ್ಮನ್ನು ಗೋವಿಂದಪ್ಪರವರ ಮನೆಯ ಬಳಿ 4 ನೇ ಕ್ರಾಸ್ , 4 ನೇ ಮೈನ್ , ಅನ್ನಪೂರ್ಣೇಶ್ವರಿ ನಗರ,

ಲಗ್ಗೇರೆ, ಬೆಂಗಳೂರು ಇಲ್ಲಿಗೆ ಕರೆದುಕೊಂಡು ಬಂದರು ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿ ಪ್ರಮೋದನ ಕಡೆಯಿಂದ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ 500 ರೂ ಮುಖಬೆಲೆಯ 20 ನೋಟಗಳು ಒಟ್ಟು 10,000 00 ನಗದು ಹಣವನ್ನು ನಮ್ಮ ಸಮಕ್ಷಮ ಸಂಜೆ 7.15 ರಿಂದ 8.15 ರವರಿಗೆ ಅಮಾನತ್ತುಪಡಿಸಿಕೊಂಡು ನಿಪಿ 50 ರಂತೆ ಪಂಚನಾಮೆ ಮಾಡಿ ಪಂಚನಾಮೆಗೆ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ.

20) ಮೇಲ್ಕಂಡ ಎಲ್ಲಾ ಪಂಚನಾಮೆಗಳನ್ನು ದಿ 29.11.18 ರಂದು ಆರೋಪಿಗಳು ತೋರಿಸಿದ ರೀತ್ಯಾ ವಿವಿದ ಸ್ಥಳಗಳಲ್ಲಿ ಪೋಲೀಸರು ನಮ್ಮ ಸಮಕ್ಷಮ ಕೈಗೊಂಡು ನ್ಯಾಯಾಲಯದಮುಂದೆ ಹಾಜರುಪಡಿಸಿರುವ ಎಲ್ಲಾ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ದಿ 29.11.2018 ರಂದು ಪೊಲೀಸರು ವಿವಿಧ ಸ್ಥಳಗಳಲ್ಲಿ ಪಂಚನಾಮೆ ಮಾಡಿ ನಾನು ಪೋಲೀಸರಿಗೆ ಸಹಕರಿಸಿದ ಬಗ್ಗೆ ನಿಪಿ.56 ರಂತೆ ನನ್ನ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.

21) ಮೇಲೆ ಹೇಳಿದ ಎಲ್ಲಾ ಪಂಚನಾಮೆಗಳಿಗೂ ನಾನು ಸಹಕರಿಸಿದ್ದರು ಸಹ ಆರೋಪಿಗಳನ್ನು ಶಿಕ್ಷೆಯಿಂದ ತಪ್ಪಿಸಲು ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ 1, 5 ರಿಂದ 9 ಆರೋಪಿತರ ಪರ ವಕೀಲರಿಂದ ಇಲ್ಲ

ಪಾಟೀ ಸವಾಲು 2 ರಿಂದ 4 ನೇ ಆರೋಪಿತರ ಪರ ಶ್ರೀ ಬಿ ಎಸ್ ಜೆ ವಕೀಲರಿಂದಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.